ಪದಬಂಧ



### ಎಡದಿಂದ ಬಲಕ್ಕೆ

1. ಆತ ತನ್ನ ಆಸ್ತಿಯನ್ನೆಲ್ಲ ತ್ಯಾಗ ಮಾಡಿದನೆಂಬುದು ಸುಳ್ಳು 3
3. ವ್ಯಾಜ್ಯವನ್ನು ಹೂಡಿದವಳು ಅವರ ಸೇವಕಿಯೇ ಅಲ್ಲವೇ? 3
4. ಆ ಹುಡುಗ ಜೇಬಿನಲ್ಲಿ ತುಂಬಿದ್ದಾನೆ ನೋಡಿ ಪ್ರಸಿದ್ಧ ಸಿಹಿತಿಂಡಿ 3
6. ದಾನ ಮಾಡಲೆಂದು ಸೇರಿಸಿಟ್ಟಿದ್ದು ಈ ಹಣದ ಸಂಪತ್ತು 4
7. 'ಜೀವದ ಜೊತೆಗಿನ ಗಾಳಿ' ಎಂದರೆ ಆಮ್ಲಜನಕವೇ ತಾನೇ? 4
9. ಕಾಡಿನಲ್ಲಿ ಕಾರು ಓಡಿಸಿದವರು ಕಂಡೊಡನೆ ಸಿಟ್ಟಿನ ಮಾತಾಡು 4
11. ಮರಳಿ ಮರಳಿ ಅದೇ ಪರಿಯ ಸುಗಂಧ 4
15. ಗೂಂಡಾಗಳಂತೆ ವರ್ತಿಸಿತು ನೋಡಿ ಆ ಭಾರೀ ಗಂಡು ಮಂಗ 3
16. ಎಷ್ಟು ಜಬರುದಸ್ತಾಗಿದೆ ಆ ಕಟ್ಟಡದ ಗುಮ್ಮಟ! 3
17. ಕೋಲನ್ನು ಬೀಸ ಹೋದರೆ ದಾಳಿಗೆ ಬಂದೀತು ಮುಂಗುಸಿ 3

### ಮೇಲಿನಿಂದ ಕೆಳಕ್ಕೆ

1. ಅತಿಶಯ ಏನೇ ಇದ್ದರೂ ಅದಾವುದೂ ಶಾಶ್ವತವಲ್ಲ 3
2. ಸೂಜಿಯಂತೆ ಸದಾ ಚುಚ್ಚಿ ನುಡಿವವರನ್ನು ತೊರೆದುಬಿಡು 3
3. ಜೇನಿನಂತೆ ಮಧುರ ಪ್ರೀತಿಯನ್ನು ಸದಾ ಹರಿಸುತ್ತಾಳೆ ತಾಯಿ 3
5. ನಾನಾ ಬಣ್ಣಗಳನ್ನು ಬಳಸಿದ್ದಕ್ಕೆ ಇಂಥ ಬೆಡಗು, ಸೊಬಗು 3
6. ಹೆಸರು ಮಂದಾಕಿನಿ; ಎಲ್ಲರಿಗೂ ಹಾಕುತ್ತಾಳೆ ಮಾತಿನ ಬೆದರಿಕೆ 3
8. ಈ ಈರ್ವರೂ ಗೆಳೆಯರದು ಎಂಥ ವಿಶಿಷ್ಟ ಜೋಡಿ! 3
10. ವಸ್ತುಗಳನ್ನು ಕೊಳ್ಳುವಾಗ ನಡೆಯಿತು ಭಾರೀ ಯುದ್ಧ 3
12. ವಾರಿಜನಾಭನನ್ನು ಪೂಜಿಸುವುದು ಅಲ್ಲಿನ ಸಂಪ್ರದಾಯ 3
13. ಕೆಟ್ಟ ವ್ಯಾಪಾರವನ್ನು ಕೈ ಬಿಟ್ಟವನ ಬದುಕು ಪವಿತ್ರವಾಯಿತು 3
14. ಭೋಜನಾ ನಂತರ ಬಂತಲ್ಲ ಎಲ್ಲರಿಗೂ ಎಲೆ ಅಡಿಕೆ? 3

---

## 15–06–2022 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಹನೀಯ 3. ಪ್ರಮಾದ 4. ಕ್ಷಿತಿಜ 6. ಕಲರವ 8. ಸಾಮಯಿಕ 10. ರಸಹೀನ 12. ನಮಸ್ಕಾರ 16. ಯಮಳ 17. ಸಜ್ಜನ 18. ತುರಂಗಮ

**ಮೇಲಿನಿಂದ ಕೆಳಕ್ಕೆ**

1. ಸದನ 2. ಯಕ್ಷಿಣಿ 3. ಪ್ರಖರ 5. ಜನುಮ 6. ಕನವರ 7. ವರ್ತಮಾನ 8. ಸಾವಧಾನ 9. ಕಲಾಕಾರ 11. ಹೀನಾಯ 13. ಮರ್ದನ 14. ಹಳತು 15. ಅಸಮ

ಪ್ರಶ್ನಾಂಕಣ

# ನಮ್ಮ ಪ್ರಥಮ ಹೆಜ್ಜೆಗುರುತು ಪತ್ತೆ?

ಆಧುನಿಕ ಮಾನವರಾದ ನಮ್ಮ, 'ಬುದ್ಧಿವಂತ ಮನುಷ್ಯ'ರಾದ ನಮ್ಮ, ಎಂದರೆ 'ಹೋಮೊ ಸೇಪಿಯನ್' ಪ್ರಭೇದದ ಪ್ರಥಮ ಹೆಜ್ಜೆ ಗುರುತುಗಳು (Footprints) ಪತ್ತೆಯಾಗಿವೆಯೇ? ಹೌದಾದರೆ ಎಲ್ಲಿ? ಮತ್ತು ಅವುಗಳ ಮೂಲ ಕಾಲ ಏನು?

ತುಂಬ ಕುತೂಹಲದ ಈ ಪ್ರಶ್ನೆಗಳನ್ನು ಕುರಿತ ಸಂಶೋಧನಾ ವರದಿಯೊಂದು ಪ್ರತಿಷ್ಠಿತ ವೈಜ್ಞಾನಿಕ ಜರ್ನಲ್ ಟೆಚ್ನೋಸ್‌ನಲ್ಲಿ (ಅದು ಕುರುಹಿನ ಪಳೆಯುಳಿಕೆಗಳನ್ನು, ಎಂದರೆ Trace Fossils ಅನ್ನು ಕುರಿತ ಸಂಶೋಧನೆಗಳನ್ನು ಪ್ರಕಟಿಸುವ ಅಂತರರಾಷ್ಟ್ರೀಯ ವಿಜ್ಞಾನ ಪತ್ರಿಕೆ) ಇದೇ ವರ್ಷ ಏಪ್ರಿಲ್ 25ರ ಸಂಚಿಕೆಯಲ್ಲಿ ಪ್ರಕಟವಾಗಿದೆ.

ವಸ್ತುಸ್ಥಿತಿ ಏನೆಂದರೆ, ಸುಮಾರು ನಾಲ್ಕು ದಶಲಕ್ಷ ವರ್ಷ ಹಿಂದಿನ ಮೂಲ ದ್ವಿಪಾದಿ ಮಾನವ ಪ್ರಭೇದಗಳಾದ 'ಅಸ್ಟ್ರಲೋಪಿಥೀಕಸ್'ಗಳಿಂದ (ಚಿತ್ರ 1, 2) ತೊಡಗಿ ಸುಮಾರು ಮೂರು ಲಕ್ಷ ವರ್ಷ ಹಿಂದೆ ಅವತರಿಸಿದ 'ಹೋಮೊ ಸೇಪಿಯನ್'ರವರೆಗಿನ, ಸುಮಾರು 50,000 ವರ್ಷಗಳಿಗೂ ಹಿಂದಿನ ವಿವಿಧ ಮಾನವ ಪ್ರಭೇದಗಳ ಹಲವಾರು ಹೆಜ್ಜೆಗುರುತುಗಳ ಪಳೆಯುಳಿಕೆಗಳು (ಚಿತ್ರ 3) ಈವರೆಗೆ ಪತ್ತೆಯಾಗಿವೆ. ಅಂತಹ ಒಟ್ಟು 24 ಕುರುಹು ಪಳೆಯುಳಿಕೆ ನೆಲೆಗಳನ್ನು, ಎಂದರೆ 'ಟೆಚ್ನೋಸೈಟ್'ಗಳನ್ನು ಈವರೆಗೆ ಶೋಧಗೊಳಿಸಲಾಗಿದೆ. ಅವುಗಳಲ್ಲಿ ಪೂರ್ವ ಆಫ್ರಿಕಾದ ವಿವಿಧ ಪ್ರದೇಶಗಳಲ್ಲಿ 5, ದಕ್ಷಿಣ ಆಫ್ರಿಕಾ ದೇಶದಲ್ಲಿ 9 ಹಾಗೂ ಯು.ಕೆ., ಅರಬ್ ಪರ್ಯಾಯ ದ್ವೀಪ ಪ್ರದೇಶ ಮತ್ತಿತರೆಡೆಗಳಲ್ಲಿ 10 ನೆಲೆಗಳು ಲಭ್ಯವಾಗಿವೆ. ಆ ಪೈಕಿ ದಕ್ಷಿಣ ಆಫ್ರಿಕಾದಲ್ಲಿ ಹೊಸದಾಗಿ ಪತ್ತೆಯಾದ ಏಳು ನೆಲೆಗಳ ಕಾಲಮೂಲಗಳನ್ನು ಕಳೆದ ಐದು ವರ್ಷಗಳಿಂದ ಅಭ್ಯಸಿಸಿ ಇದೀಗ ನಿರ್ಧರಿಸಲಾಗಿದೆ.



ವಿಸ್ಮಯ ಏನೆಂದರೆ, ದಕ್ಷಿಣ ಆಫ್ರಿಕಾದ ಕೇಪ್‌ಟೌನ್‌ನ ದಕ್ಷಿಣ ಕಡಲಂಚಿನ ಪ್ರದೇಶದ ಏಳೂ ಟೆಚ್ನೋಸೈಟ್‌ಗಳಲ್ಲಿ ಪ್ರಾಪ್ತವಾಗಿರುವ ಮನುಷ್ಯ ಹೆಜ್ಜೆಗುರುತಿನ ಪಳೆಯುಳಿಕೆಗಳೆಲ್ಲವೂ ಸುಮಾರು 71,000 ವರ್ಷದಿಂದ 1,53,000 ವರ್ಷಗಳ ಹಿಂದಿನವರೆಗಿನ ವಿವಿಧ ಕಾಲಗಳದ್ದಾಗಿವೆ. ಆ ಪ್ರದೇಶಗಳಲ್ಲೇ ದೊರಕಿರುವ ಇತರ ಅವಶೇಷಗಳು ಎಂದರೆ ಶಿಲಾಯುಧಗಳು, ಕಲಾಕೃತಿಗಳು, ಕಡಲ ಚಿಪ್ಪಿನ ಆಭರಣಗಳು ಇತ್ಯಾದಿ ಎಲ್ಲವೂ ಆ ಹೆಜ್ಜೆಗುರುತುಗಳು ಹೋಮೊ ಸೇಪಿಯನ್ ಪ್ರಭೇದದ್ದೇ ಹೌದೆಂದು ಸ್ಪಷ್ಟಪಡಿಸಿವೆ. ಇಷ್ಟೊಂದು ಪ್ರಾಚೀನವಾದ ಎಂದರೆ 1,53,000 ವರ್ಷಗಳಷ್ಟು ಹಿಂದಿನ ಕಾಲದ ಹೋಮೊ ಸೇಪಿಯನ್ ಹೆಜ್ಜೆಗುರುತಿನ ಪಳೆಯುಳಿಕೆಗಳು ಧರೆಯಲ್ಲಿ ಈವರೆಗೆ ಬೇರೆಲ್ಲೂ ಪತ್ತೆಯಾಗಿಲ್ಲ.

ಹಾಗೆಂದರೆ ಪೃಥ್ವಿಯಲ್ಲಿ ನಮ್ಮ, ಎಂದರೆ ಹೋಮೊ ಸೇಪಿಯನ್ನರ, ಪ್ರಥಮ ಹೆಜ್ಜೆಗುರುತಿನ ನೆಲೆ ದಕ್ಷಿಣ ಆಫ್ರಿಕಾ ಮತ್ತು ಅದರ ಪ್ರಾಚೀನತೆ 1,53,000 ವರ್ಷ ಎಂಬುದು ಸ್ಪಷ್ಟವಾಯಿತಲ್ಲವೇ?

■ ಎನ್. ವಾಸುದೇವ್